



# ಪವಿತ್ರ ಪತ್ರಮಾಲೆ

## ಸ್ವಾಮಿ ತುರೀಯಾನಂದಜಿ ಅವರ ಒಂದು ಪತ್ರ

*ಆಲ್ಮೋರಾ*
*೨೭ ಜುಲೈ ೧೯೧೫*

*ಪ್ರೀತಿಯ ಸುರೇಶ್* (ಸ್ವಾಮಿ ಯತೀಶ್ವರಾನಂದ),

ಬಹಳ ಕಾಲದ ನಂತರ ನಿನ್ನ ಪತ್ರವನ್ನು ಮೊನ್ನೆ ಸ್ವೀಕರಿಸಿ ತುಂಬ ಆನಂದವಾಯಿತು. ಭಗವಂತನು ತನ್ನ ಕಾರ್ಯವನ್ನು ನಿನ್ನ ಮೂಲಕ ನಡೆಸಲಿ. ಈ ಕಾರ್ಯವನ್ನು ನೀನು ಹೃತ್ಪೂರ್ವಕವಾಗಿ ಮತ್ತು ಆತ್ಮಪೂರ್ವಕವಾಗಿ ನೆರವೇರಿಸಿ ಧನ್ಯನಾಗು! ಇದಕ್ಕಿಂತ ಒಬ್ಬನು ಇಚ್ಛಿಸಬೇಕಾದುದು ಇನ್ನೇನು ತಾನೇ ಇದೆ?



"ಇದುವರೆಗೆ ನನಗೆ ಯಾವುದೇ ರೀತಿಯ ಅನುಭವವೂ ಆಗಿಲ್ಲ. ನಾನು ನನ್ನ ದಿನಗಳನ್ನು ಸಂಕಷ್ಟದಿಂದ ಕಳೆಯುತ್ತಿದ್ದೇನೆ" ಎಂದು ನೀನು ನಿನ್ನ ಪತ್ರದಲ್ಲಿ ಗೊಣಗಾಡಿಕೊಂಡಿದ್ದೀಯೆ. ಹೀಗೆ ನೀನು ಏಕೆ ಬರೆದಿದ್ದೀಯೆಂದು ನನಗೆ ಅರ್ಥವಾಗುತ್ತಿಲ್ಲ. ಭಗವತ್ಸಾಕ್ಷಾತ್ಕಾರವಾಗಿಲ್ಲವೆಂದು ನಿನಗೆ ನಿಜವಾಗಲೂ ದುಃಖವಾಗಿದ್ದರೆ, ಮಂಗಳಮಯ ಮುಹೂರ್ತವು ಸದ್ಯದಲ್ಲಿಯೇ ನಿನಗೆ ಒದಗಿಬರಲಿದೆಯೆಂದು ಭಾವಿಸಿ ನಿರಾಳವಾಗಿರು. ಈ ರೀತಿ ನೀನು ಹೆಚ್ಚು ಹೆಚ್ಚು ಉತ್ಕಟವಾಗಿ ಭಾವಿಸಿದಂತೆಲ್ಲ, ಭಗವದನುಗ್ರಹವು ಸಮೀಪಿಸುತ್ತಿದೆಯೆಂದು ತಿಳಿದುಕೋ. ನಿನ್ನ ಈ ಖಿನ್ನತೆಯ ಭಾವನೆಗೆ ಬೇರೆ ಯಾವುದಾದರೂ ಲೌಕಿಕವಾದ ಮಾನಸಿಕ ಬಯಕೆಯು ಕಾರಣವಾಗಿದ್ದರೆ, ಅದನ್ನು ಒಡನೆ ಕಿತ್ತೊಗೆಯಲು ಪ್ರಯತ್ನಿಸು. ಇದನ್ನು ಕಡೆಗಣಿಸಬೇಡ. ಏಕೆಂದರೆ ಇಂಥ ಖಿನ್ನತೆಯ ಮನೋಭಾವವು ನಿನ್ನ ಆಧ್ಯಾತ್ಮಿಕ ಜೀವನದಲ್ಲಿ ಅತಿ ದೊಡ್ಡ ಅಡ್ಡಗಾಲಾಗಿಬಿಡುತ್ತದೆ. ನೀನು ಕೈಗೊಂಡಿರುವ ಆಧ್ಯಾತ್ಮಿಕ ಪ್ರಯಾಣಕ್ಕೆ ಅರ್ಹನಾಗಲು ಅನವರತವೂ ಪ್ರಯತ್ನಿಸು. ಆಗ ಮಾತ್ರ ಭಗವಂತನು ನಿನ್ನಲ್ಲಿ ಸುಪ್ರೀತನಾಗುವನು; ನಿನ್ನನ್ನು ಎಲ್ಲ ಆನಂದದ ಹಕ್ಕುದಾರನನ್ನಾಗಿ ಮಾಡುವನು.

"ನಿನ್ನ ಗುರುವಿನ ಮನೆಯಲ್ಲಿ, ಏನೂ ಗೊಣಗದೆ ಹಸುವಿನಂತೆ ಇರು" – ಸ್ವಾಮಿ ವಿವೇಕಾನಂದರು ಒಬ್ಬ ಮಹಾನ್ ಸಂತರಿಂದ (ಗಾಜಿಪುರದ ಪವಾಹಾರಿ ಬಾಬಾ) ಕೇಳಿದ ಮಾತು ಇದು. ಇದನ್ನು ಅವರು ನಮಗೆ ಮತ್ತೆ ಮತ್ತೆ ಹೇಳುತ್ತಿದ್ದರು. ಆ ಮಹಾತ್ಮರು ನೀಡಿದ ಇನ್ನೊಂದು ಉಪಯುಕ್ತ ಉಪದೇಶ ಹೀಗಿದೆ: "ನಿನ್ನ ಸಹೋದರ ಶಿಷ್ಯರನ್ನು, ನಿನ್ನ ಗುರುಗಳನ್ನು ನೋಡಿಕೊಳ್ಳುವಷ್ಟೇ ಚೆನ್ನಾಗಿ ಆರೈಕೆ ಮಾಡು."

ನಮ್ಮ ಮುಖ್ಯ ಕರ್ತವ್ಯವೆಂದರೆ ಭಗವಂತನ ಬಾಗಿಲಿನಲ್ಲಿ ತುಂಬು ವಿನಯದಿಂದ ಕಾಯ್ದುನಿಂತಿರುವುದು. ಇದನ್ನು ನೀನು ಮಾಡಬಲ್ಲೆಯಾದರೆ, ಆತನ ಕರುಣೆಯು ಖಂಡಿತ ಒದಗಿ ಬರುತ್ತದೆ. ಹಾಗೂ ಅತೀವ ಸಂತೋಷವು ದುಃಖದ ಜಾಗವನ್ನು ತುಂಬುತ್ತದೆ. "ಆತನ ಬಾಗಿಲಿನಲ್ಲಿ ನಿಲ್ಲಲು ಅವಕಾಶ ಮಾಡಿಕೊಟ್ಟಿರುವುದು ಭಗವಂತನ ಅಸೀಮ ಕರುಣೆಯೇ ಆಗಿದೆ" – ಇದನ್ನು ಅರಿತವನು ನಿಸ್ಸಂದೇಹವಾಗಿ ಭಗವಂತನ ಪೂರ್ಣಕೃಪೆಯನ್ನು ಹೆಚ್ಚು ತಡವಿಲ್ಲದೆ ಸ್ವೀಕರಿಸುವನು. ಭಗವಂತನನ್ನು ಹೃದಯಪೂರ್ವಕವಾಗಿ, ಆತ್ಮಪೂರ್ವಕವಾಗಿ ಪ್ರೀತಿಸಲು ಕಲಿತುಕೋ. ಸಂತೋಷ ಮತ್ತು ಸಂಕಷ್ಟಗಳಿಗೆ ಏಕೆ ತಾನೇ ನೀನು ಅಷ್ಟೊಂದು ಮಹತ್ವವನ್ನು ನೀಡುತ್ತೀಯೆ? ಭಗವಂತನಲ್ಲಿ ಸಂಪೂರ್ಣವಾಗಿ ಶರಣಾಗು. ಅವನು ನಿನ್ನನ್ನು ಎಲ್ಲಿ ಇರಿಸುತ್ತಾನೆಯೋ, ಅದೇ ನಿನಗೆ ಒಳಿತಾದುದು ಎಂದು ತಿಳಿದುಕೋ. "ಈ ಬಗೆಯ ಶರಣಾಗತಭಾವವು ನನ್ನ ಮನಸ್ಸಿನಲ್ಲಿ ದೃಢವಾಗಿ ನೆಲೆದೋರಲಿ" ಎಂದು ಭಗವಂತನನ್ನು ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡು. ಆಗ ಎಲ್ಲವೂ ಸರಿಯಾಗುವುದು.

*ನಿನ್ನ ಹಿತಾಕಾಂಕ್ಷಿ*

**ತುರೀಯಾನಂದ**

# ದೇವಿ ಕಾಮಾಖ್ಯ

ಪ್ರವ್ರಾಜಿಕಾ ಧರ್ಮಪ್ರಾಣಾ



**ಕಾಮಾಖ್ಯೇ ವರದೇ ದೇವಿ ನೀಲಪರ್ವತವಾಸಿನಿ ।**
**ತ್ವಂ ದೇವಿ ಜಗತಾಂ ಮಾತೆ ಯೋನಿಮುದ್ರೇ ನಮೋಽಸ್ತು ತೇ ॥**

ಭಾರತದ ಅಸಂಖ್ಯ ತೀರ್ಥಸ್ಥಾನಗಳಲ್ಲಿ ಅಸ್ಸಾಂ ರಾಜ್ಯದ ನೀಲಾಚಲ ಪರ್ವತದಲ್ಲಿ ಇರುವ ಕಾಮಾಖ್ಯ ದೇವಸ್ಥಾನವೂ ಒಂದು. ಇದು ಒಂದು ಶಕ್ತಿಪೀಠ. ಭಾರತದಾದ್ಯಂತ ಇರುವ ೫೧ ಶಕ್ತಿಪೀಠಗಳಲ್ಲಿ ಇದೂ ಒಂದು. ಇಲ್ಲಿ ತಾಂತ್ರಿಕ ಪೂಜೆಯೇ ಪ್ರಧಾನ. ದೇವಿಯನ್ನು ಇಲ್ಲಿ ಕಾಳಿಯ ರೂಪದಲ್ಲಿ ಪೂಜಿಸುತ್ತಾರೆ. ಕಾಳಿಕಾಪುರಾಣದಲ್ಲಿ ಈ ಕ್ಷೇತ್ರದ ಬಗ್ಗೆ ವಿಸ್ತಾರವಾಗಿ ವರ್ಣಿಸಲಾಗಿದೆ. ಇಲ್ಲಿ ದೇವಿಯ ಜಾಗೃತ ಸನ್ನಿಧಿ ಇದೆ. ಇದರ ಜೊತೆಗೆ ಪ್ರಕೃತಿಯ ಮನೋಹರ ದೃಶ್ಯವೂ ಕಾಣಬರುತ್ತದೆ. ಅಲ್ಲದೆ, ಆಧ್ಯಾತ್ಮಿಕತೆಯ ವಾತಾವರಣವನ್ನೂ ಅನುಭವಿಸಬಹುದು. ಇವೆಲ್ಲವುಗಳಿಂದ ಕೂಡಿದ ನೀಲಾಚಲ ಪರ್ವತವು ಪ್ರತಿದಿನವೂ ಸಾವಿರಾರು ಜನರನ್ನು ಆಕರ್ಷಿಸುತ್ತಿದೆ.

**ಪುಣ್ಯಭೂಮಿಯಾದ ಭಾರತ ದೇಶದ ಉದ್ದಗಲಕ್ಕೂ ೫೧ ಶಕ್ತಿಪೀಠಗಳಿವೆ. ಅವುಗಳಲ್ಲಿ ಅಸ್ಸಾಂ ರಾಜ್ಯದಲ್ಲಿ ಇರುವ ಕಾಮಾಖ್ಯ ದೇವಿ ಮಂದಿರವೂ ಒಂದು. ಜಗನ್ಮಾತೆಯ ಲೀಲೆ ಇಲ್ಲಿ ಅದ್ಭುತವಾಗಿ ನಡೆದಿರುವುದನ್ನು ವಿಶದವಾಗಿ, ಪೌರಾಣಿಕ ಮತ್ತು ಐತಿಹಾಸಿಕ ಉಲ್ಲೇಖಗಳೊಡನೆ ಈ ಲೇಖನದಲ್ಲಿ ವಿವರಿಸಲಾಗಿದೆ.**

**ಪೂಜ್ಯ ಮಾತಾಜಿಯವರು ಅರುಣಾಚಲ ರಾಜ್ಯದ ಖೋನ್ಸಾ ಎಂಬಲ್ಲಿ, ಶ್ರೀಶಾರದಾ ಮಠದ ವತಿಯಿಂದ ನಡೆಸಲಾಗುತ್ತಿರುವ ಬಾಲಕಿಯರ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಬರಹಗಾರರಾದ ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.**

'ಕಾಮಾಖ್ಯ' ಎನ್ನುವುದಕ್ಕೆ ಹಲವು ವಿವರಣೆಗಳನ್ನು ನೀಡಬಹುದು. ಅವುಗಳಲ್ಲಿ ಕೆಲವು ಹೀಗಿವೆ: ೧. 'ಕಾ' ಎಂದರೆ ಸ್ತ್ರೀ ಎಂದು ಅರ್ಥ. 'ಮಾ' ಎಂದರೆ ತಾಯಿ ಎಂದರ್ಥ. 'ಖ' ಎಂದರೆ ಹುಟ್ಟಿಸುವವಳು. ಅಂದರೆ, ಇಲ್ಲಿ ದೇವಿಯನ್ನು ಆದ್ಯಾಶಕ್ತಿಯ ರೂಪದಲ್ಲಿ ಆಚರಿಸುತ್ತಾರೆ.

೨. ನಿತ್ಯಜೀವನಕ್ಕೆ ಆಹಾರವನ್ನು ಭೂಮಿಯು ಒದಗಿಸಿಕೊಡುತ್ತಿದೆ. ಭೂಮಿಯನ್ನು ತಾಯಿಯೆಂದು ನಾವು ಭಾವಿಸುತ್ತೇವೆ. ಸಾಕ್ಷಾತ್ ಭೂದೇವಿಯನ್ನೇ 'ಕಾಮಾಖ್ಯ' ಎಂಬ ಹೆಸರಿನಿಂದ ಇಲ್ಲಿ ಪೂಜಿಸುವರು.

೩. 'ಕಾಮ' ಎಂದರೆ ಸೃಷ್ಟಿಕ್ರಿಯೆ ಎಂದೂ ಆಗುತ್ತದೆ. ಹೀಗಾಗಿ ಸೃಷ್ಟಿಯ ಮೂಲವಾದ ಪರಮಪ್ರಕೃತಿಯನ್ನು 'ಕಾಮಾಖ್ಯ' ಎಂಬ ಹೆಸರಿನಿಂದ ಪೂಜಿಸುತ್ತಾರೆ.

ಕಾಮಾಖ್ಯ ದೇವಾಲಯದ ಪೌರಾಣಿಕ ಕತೆಯು ಬಹಳ ವಿಶಿಷ್ಟವಾದುದು. ಇದನ್ನು ಆ ಆದ್ಯಾಶಕ್ತಿಯ ಅನಂತ ಲೀಲೆಗಳಲ್ಲಿ ಒಂದು ಎಂದು ಹೇಳಬಹುದು.

ದಕ್ಷಪ್ರಜಾಪತಿಯು ಬ್ರಹ್ಮದೇವನ ಪುತ್ರ. ಅವನ ಪತ್ನಿ ಪ್ರಸೂತಿ. ಅವನಿಗೆ ಹದಿನಾರು ಹೆಣ್ಣುಮಕ್ಕಳು. ಅವರಲ್ಲಿ ಕೊನೆಯವಳು ಸತೀ. ಇವಳನ್ನು ಮಹಾದೇವನಿಗೆ ದಕ್ಷನು ವಿವಾಹ ಮಾಡಿಕೊಟ್ಟನು. ಸತೀದೇವಿಯು ಮಹಾವೈರಾಗ್ಯಶಾಲಿಯಾದ ಶಿವನೊಡನೆ ತಪಸ್ಸಿನ ಜೀವನವನ್ನೇ ನಡೆಸುತ್ತಿದ್ದಳು. ಆದರೆ ಶಿವನ ವೈರಾಗ್ಯ, ಅವನ ವೇಷಭೂಷಣ ಮತ್ತು ನಿರ್ವಿಕಾರವಾದ ಸ್ವಭಾವಗಳು ಮಾವನಾದ ದಕ್ಷಪ್ರಜಾಪತಿಗೆ ಹಿಡಿಸಲಿಲ್ಲ. ಉಳಿದವರಿಗೆ ಕೊಡುವ ಗೌರವ, ಸನ್ಮಾನಗಳನ್ನು ಅವನು ಶಿವನಿಗೆ ಕೊಡುತ್ತಿರಲಿಲ್ಲ.

ಏತನ್ಮಧ್ಯೆ ದಕ್ಷನು ಒಂದು ಯಜ್ಞವನ್ನು ಮಾಡಿದನು. ಅದಕ್ಕೆ ಶಿವನನ್ನು ಬಿಟ್ಟು ಉಳಿದ ದೇವಾಧಿದೇವತೆಗಳೆಲ್ಲರನ್ನೂ ಆಹ್ವಾನಿಸಿದನು. ಆದರೂ ಸತಿದೇವಿಯು ತವರಿಗೆ ಹೋಗಲು ಇಚ್ಛಿಸಿದಳು. ಕರೆಯದೆ ಹೋಗುವುದು ತರವಲ್ಲವೆಂದು ಶಿವನು ಸಮ್ಮತಿಯನ್ನು ನೀಡಲಿಲ್ಲ. ಸತಿಯು ಮತ್ತೆ ಮತ್ತೆ ಕೇಳಿಕೊಂಡಳು. ಆದರೆ ಶಿವನು ಒಪ್ಪಲಿಲ್ಲ. ಸತಿಯ ದುಃಖವು ಕೋಪಕ್ಕೆ ತಿರುಗಿತು. ಅವಳು ತನ್ನ ಉಗ್ರ ದಶಮಹಾವಿದ್ಯಾರೂಪಗಳಿಂದ ಶಿವನ ಮುಂದೆ ಪ್ರಕಟಗೊಂಡಳು. ಕೊನೆಗೂ ಕೈಲಾಸವನ್ನು ಬಿಟ್ಟು ದಕ್ಷನ ಯಜ್ಞಶಾಲೆಗೆ ಹೋದಳು. ಶಿವನ ಗಣಗಳೂ ತಮ್ಮ ಒಡತಿಯನ್ನು ಹಿಂಬಾಲಿಸಿದವು. ಈಗಾಗಲೇ ಯಜ್ಞವು ಆರಂಭವಾಗಿತ್ತು.

ಸತಿಯು ಯಜ್ಞಶಾಲೆಯನ್ನು ಪ್ರವೇಶಿಸಿದಳು. ಆದರೆ ಯಾರೂ ಆಕೆಯನ್ನು ಸ್ವಾಗತಿಸಲಿಲ್ಲ. ದಕ್ಷನಿಗೆ ಭಯಪಟ್ಟು ಎಲ್ಲರೂ ಸುಮ್ಮನೆ ಇದ್ದರು. ಹೀಗೆ ತನ್ನ ಬಂಧುಬಳಗದವರಿಂದಲೇ ಸತೀದೇವಿಯು ಅಪಮಾನಿತಳಾದಳು. ಮತ್ತೆ ಪತಿಯ ಬಳಿಗೆ ಹೋಗಲು ಆಕೆಯ ಅಭಿಮಾನ ಅಡ್ಡಬಂತು. ಕೋಪ ಮತ್ತು ದುಃಖಗಳಿಂದ ಕೂಡಿ ಯಜ್ಞಕುಂಡಕ್ಕೆ ಹಾರಿದಳು. ಆ ಮೂಲಕ ತನ್ನ ದೇಹವನ್ನು ತ್ಯಜಿಸಿದಳು.

ಜೊತೆಯಲ್ಲಿ ಹೋಗಿದ್ದ ಶಿವನ ಗಣಗಳು ಈ ವಿಷಯವನ್ನು ತಮ್ಮ ಒಡೆಯನಿಗೆ ತಿಳಿಸಿದವು. ಉಗ್ರರೂಪವನ್ನು ತಾಳಿದ ಶಿವನು ಯಜ್ಞಶಾಲೆಯನ್ನು ಪ್ರವೇಶಿಸಿದನು. ಪತ್ನಿಯ ಮೃತಶರೀರವನ್ನು ಕಂಡು ಅತೀವ ದುಃಖಿತನಾದನು. ಅವಳ ಶರೀರವನ್ನು ಹೆಗಲಿನಲ್ಲಿ ಇಟ್ಟುಕೊಂಡು ಹೊರಬಂದನು. ಅತೀವ ತಾಪದಿಂದ ಕುದಿಯುತ್ತ ಉನ್ಮತ್ತನಾಗಿ ಹಾಗೆಯೇ ತ್ರಿಲೋಕಗಳನ್ನು ಸುತ್ತತೊಡಗಿದನು.

ಪರಶಿವನ ಈ ರೋಷದಿಂದ ಪ್ರಪಂಚದ ವಿದ್ಯಮಾನಗಳೆಲ್ಲವೂ ಏರುಪೇರಾದವು. ಅನಾಹುತಗಳ ಸರಣಿಯೇ ಆರಂಭವಾಯಿತು. ದೇವತೆಗಳೆಲ್ಲ ಭಯದಿಂದ ತತ್ತರಿಸಲಾರಂಭಿಸಿದರು. ಅವರೆಲ್ಲರೂ ಸೇರಿ ಮಹಾವಿಷ್ಣುವಿನಲ್ಲಿ ಶರಣಾದರು. ಶಿವನನ್ನು ಸಹಜಸ್ಥಿತಿಗೆ ತರಲು, ಮಹಾವಿಷ್ಣುವು ಶಿವನಿಂದ ಸತಿಯ ದೇಹವನ್ನು ಪ್ರತ್ಯೇಕಿಸಲು ನಿಶ್ಚಯಿಸಿದನು. ಅದಕ್ಕಾಗಿ ಸುದರ್ಶನ ಚಕ್ರವನ್ನು ಉಪಯೋಗಿಸಿದನು. ಹೀಗೆ ಸುದರ್ಶನ ಚಕ್ರವು ಬೇರ್ಪಡಿಸುತ್ತಿರುವಾಗ, ಶಿವನು ಅಲೆದಾಡುತ್ತಿದ್ದ ಸ್ಥಳಗಳಲ್ಲೆಲ್ಲ ಸತಿಯ ಶರೀರದ ಅಂಗಗಳು ಒಂದೊಂದಾಗಿ ಬೀಳಲಾರಂಭಿಸಿದವು.

ಹೀಗೆ ಸತಿಯ ಅವಶೇಷಗಳು ಭಾರತದ ಹಲವು ಭೂಭಾಗಗಳಲ್ಲಿ ಬಿದ್ದವು. ಗಾಂಧಾರ ರಾಜ್ಯದಿಂದ (ಆಫ್ಘಾನಿಸ್ಥಾನ) ಹಿಡಿದು ಕಾಮರೂಪದವರೆಗೆ (ಅಸ್ಸಾಂ), ಅಮರನಾಥದಿಂದ ಹಿಡಿದು ಕನ್ಯಾಕುಮಾರಿಯವರೆಗೆ ೫೧ ಸ್ಥಳಗಳಲ್ಲಿ ಇವುಗಳು ಬಿದ್ದವು. ಬಿದ್ದ ಪ್ರತಿಯೊಂದು ಸ್ಥಳವೂ 'ಶಕ್ತಿಪೀಠ'ವೆಂದು ಪ್ರಸಿದ್ಧವಾಯಿತು. ಇಂಥ ಶಕ್ತಿಪೀಠಗಳಲ್ಲಿ ನೀಲಾಚಲ ಪರ್ವತವೂ ಒಂದು. ಇಲ್ಲಿ ಶಿಲೆಯ ರೂಪದಲ್ಲಿ ದೇವಿಯ ಸಾನ್ನಿಧ್ಯವನ್ನು ಕಾಣುತ್ತೇವೆ. ಇದು ಲಕ್ಷಗಟ್ಟಲೆ ಜನರನ್ನು ನೂರಾರು ವರ್ಷಗಳಿಂದ ಆಕರ್ಷಿಸುತ್ತಿರುವ ತೀರ್ಥಕ್ಷೇತ್ರವಾಗಿದೆ. ಇಲ್ಲಿ ಮಹಾದೇವಿಯು 'ಕಾಮಾಖ್ಯ' ಎಂಬ ಹೆಸರಿನಿಂದ ಕಂಗೊಳಿಸುತ್ತಿದ್ದಾಳೆ. ಕಾಮರೂಪ ಎಂಬ ಪ್ರದೇಶದಲ್ಲಿರುವುದರಿಂದ ಈ ದೇವಿಗೆ 'ಕಾಮಾಖ್ಯ' ಎಂದು ಹೆಸರು ಬಂದಿರಬಹುದು ಎಂದೂ ಕೆಲವರು ಹೇಳುತ್ತಾರೆ.

ಸತಿಯ ವಿರಹದಿಂದ ಅತೀವ ದುಃಖಿತನಾದ ಮಹಾದೇವನು, ಅದನ್ನು ಮರೆಯಲು ತನ್ನ ನಿಜಸ್ವರೂಪದಲ್ಲಿ ಲೀನವಾಗಿ ಧ್ಯಾನಮಗ್ನನಾದನು. ತನ್ನ ಶರೀರವನ್ನು ತ್ಯಜಿಸಿದ ಸತೀದೇವಿಯು ಹಿಮಾಲಯ ಪರ್ವತರಾಜನ ಪತ್ನಿ ಮೇನಕೆಯಲ್ಲಿ 'ಪಾರ್ವತಿ' ಎಂಬ ಹೆಸರಿನಿಂದ ಜನಿಸಿದಳು. ಶಿವನನ್ನೇ ಪತಿಯಾಗಿ ಪಡೆಯಬೇಕೆಂದು ಇಚ್ಛಿಸಿ ಘೋರ ತಪಸ್ಸನ್ನು ಆಚರಿಸಿದಳು.

ಇತ್ತ ಮಹಾದೇವನ ಮನಸ್ಸನ್ನು ಜಗತ್ತಿನ ವ್ಯವಹಾರಗಳ ಕಡೆಗೆ ಪುನಃ ಸೆಳೆಯಬೇಕಿತ್ತು. ಅದಕ್ಕಾಗಿ ಶಿವ–ಪಾರ್ವತಿಯರ ವಿವಾಹ ನಡೆಯಬೇಕಾಗಿತ್ತು. ಈ ಉದ್ದೇಶದಿಂದ ದೇವತೆಗಳು ಕಾಮದೇವನನ್ನು ಶಿವನ ಕಡೆಗೆ ಕಳುಹಿಸಿದರು. ಶಿವನ ಕೋಪಾಗ್ನಿಗೆ ಗುರಿಯಾಗಿ ಕಾಮನು ಭಸ್ಮೀಭೂತನಾದನು. ಆದರೆ, ಆಕೆಯ ಪತ್ನಿಯಾದ ರತೀದೇವಿಯ ಪ್ರಾರ್ಥನೆಯನ್ನು ಮನ್ನಿಸಿ, ಶಿವನು ಕಾಮದೇವನನ್ನು ಬದುಕಿಸಿದನು. ಆದರೆ ಹಿಂದಿನ ರೂಪವನ್ನು ಕೊಡಲಿಲ್ಲ. ಅದಕ್ಕಾಗಿ ಕಾಮದೇವನೂ ರತಿಯೂ ಮತ್ತೆ ಮತ್ತೆ ಪ್ರಾರ್ಥಿಸತೊಡಗಿದರು. ಅದಕ್ಕೆ ಶಿವನು ಕಾಮಾಖ್ಯಕ್ಕೆ ಹೋಗಿ ದೇವಿಯನ್ನು ಪೂಜಿಸಿರೆಂದು ಸೂಚಿಸಿದನು. ಹಾಗೆ ಮಾಡಲು ಕಾಮದೇವನು ಮತ್ತೆ ತನ್ನ ರೂಪವನ್ನು ಪಡೆದನು. ಅಲ್ಲಿ ದೇವಿಗೆ ಒಂದು ದೇವಸ್ಥಾನವನ್ನು ಕಟ್ಟಿಸಿದನು. ಅದನ್ನು 'ಆನಂದಾಖ್ಯ' ಎಂದು ಕರೆದನು. ದೇವಿಯ ಮಹಿಮೆಯನ್ನು ಎಲ್ಲ ಜನರಿಗೆ ಪ್ರಚಾರ ಮಾಡಿದನು. ಹೀಗೆ ಕಾಮದೇವನಿಂದ ಪೂಜಿತಳಾದ ದೇವಿಯನ್ನು ಜನರು 'ಕಾಮಾಖ್ಯ' ಎಂದು ಕರೆಯುತ್ತಾರೆ ಎಂಬ ಐತಿಹ್ಯವೂ ಇದೆ. ಆದುದರಿಂದಲೇ ಈ ದೇಶವು 'ಕಾಮರೂಪ'ವೆಂಬ ಹೆಸರು ಪಡೆಯಿತು.

ಕಾಮರೂಪವೆಂಬುದು ಹಿಂದೆ ಒಂದು ವಿಸ್ತಾರವಾದ ರಾಜ್ಯವಾಗಿತ್ತು. ಈಗ ಇದು ಅಸ್ಸಾಂ ರಾಜ್ಯದ ಒಂದು ಜಿಲ್ಲೆ ಮಾತ್ರ. ಈ ಪ್ರದೇಶದ ಬಗ್ಗೆ ರಾಮಾಯಣ, ಮಹಾಭಾರತ ಹಾಗೂ ಕೆಲವು ಪುರಾಣಗಳಲ್ಲಿ ಪ್ರಸ್ತಾಪವಿದೆ. ಶ್ರೀಕೃಷ್ಣನ ಮಡದಿಯಾದ ರುಕ್ಮಿಣಿಯ ತಂದೆ ಭೀಷ್ಮಕ. ಅವನ ರಾಜ್ಯ ಕಾಮರೂಪ ದೇಶದ ಒಂದು ಅಂಗವಾಗಿತ್ತು ಎಂದು ಹೇಳುತ್ತಾರೆ. ಶಿವಭಕ್ತನಾದ ಬಾಣಾಸುರನ ರಾಜ್ಯವಾದ 'ಶೋಣಿತಪುರ'ವೂ ಇಲ್ಲೇ ಇತ್ತು. ಭೀಮನು ವಿವಾಹವಾದ ಹಿಡಿಂಬೆಯ ಸಹೋದರನಾದ ಹಿಡಿಂಬನ ರಾಜ್ಯವೂ ಕೂಡ ಈ ಕಾಮರೂಪ ರಾಜ್ಯದಲ್ಲಿಯೇ ಇತ್ತು. ಆ ಸ್ಥಳವನ್ನು ಈಗ ಡೀಮಾಪುರ ಎನ್ನುತ್ತಾರೆ. ದುರ್ಯೋಧನನ ಪತ್ನಿ ಭಾನುಮತಿಯ ತಂದೆಯಾದ ಭಗದತ್ತನ ಊರಾದ ಪ್ರಾಗ್‌ಜ್ಯೋತಿಷಪುರವೂ ಇಲ್ಲಿನ ಒಂದು ಭಾಗವೇ ಆಗಿದೆ. ಇದು ನರಕಾಸುರನ ಊರೂ ಕೂಡ. ನರಕಾಸುರನು ಭಗದತ್ತನ ತಂದೆ ಎಂಬ ಐತಿಹ್ಯವೂ ಇದೆ.

ನರಕಾಸುರನು ಕಾಮರೂಪ ರಾಜ್ಯವನ್ನು ಆಳುತ್ತಿದ್ದನು. ತನ್ನ ಆಸುರೀ ಗುಣವನ್ನು ತ್ಯಜಿಸಿ, ಕಾಮಾಖ್ಯ ದೇವಿಯ ಭಕ್ತನಾಗಿದ್ದನು. ನೀಲಾಚಲ ಪರ್ವತದಲ್ಲಿ ಜೀರ್ಣಾವಸ್ಥೆಯಲ್ಲಿದ್ದ ದೇವಿಯ ದೇವಾಲಯವನ್ನು ಪುನರ್ನಿರ್ಮಾಣ ಮಾಡಿಸಿದನು. ಪರ್ವತವನ್ನು ಹತ್ತಲು ಹೊಸ ಮೆಟ್ಟಿಲುಗಳನ್ನು ಕಟ್ಟಿಸಿದನು. ಮಗನಾದ ಭಗದತ್ತನೂ ದೇವಿಯ ಭಕ್ತನಾಗಿದ್ದನು. ಪಾಂಡವರು ತಮ್ಮ ಅಜ್ಞಾತವಾಸದ ಸಮಯದಲ್ಲಿ ಇಲ್ಲಿಗೆ ಬಂದು, ಮತ್ತೆ ತಮಗೆ ರಾಜ್ಯ ಲಭಿಸಲೆಂದು ಕಾಮಾಖ್ಯದೇವಿಗೆ ಪ್ರಾರ್ಥನೆ ಮಾಡಿಕೊಂಡಿದ್ದರಂತೆ.

ನೀಲಾಚಲ ಪರ್ವತವು ಈಗಿನ ಅಸ್ಸಾಂ ರಾಜ್ಯದ ಕಾಮರೂಪ ಜಿಲ್ಲೆಯಲ್ಲಿದ್ದು, ಸಮತಲ ಪ್ರದೇಶದಿಂದ ಸುಮಾರು ೧೮೦ ರಿಂದ ೨೦೦ ಮೀಟರ್ ಎತ್ತರದಲ್ಲಿದೆ. ಪರ್ವತದ

ಒಂದು ಬದಿಯಲ್ಲಿ ಬ್ರಹ್ಮಪುತ್ರ ನದಿಯು ಹರಿಯುತ್ತಿದೆ. ಅಸ್ಸಾಂನ ರಾಜಧಾನಿಯಾದ ಗೌಹಾಟಿಯು ಇಲ್ಲಿಂದ ಕೇವಲ ನಾಲ್ಕು ಕಿಲೋಮೀಟರ್ ದೂರದಲ್ಲಿದೆ. ಈ ಪ್ರದೇಶದಲ್ಲಿ 'ಅಹೋಂ' ವಂಶಸ್ಥ ರಾಜರು ಕಾಲಕ್ರಮೇಣ ರಾಜ್ಯಭಾರ ಮಾಡಲು ಆರಂಭಿಸಿದರು. ಅದಕ್ಕೇ ಈ ಪ್ರದೇಶವು 'ಅಸ್ಸಾಂ' ಎಂಬ ಹೆಸರು ಪಡೆಯಿತು.



ಪೌರಾಣಿಕ ಕಾಲದಲ್ಲಿ ಅನೇಕ ಜನರು ಈ ಕ್ಷೇತ್ರವಾಸಿನಿಯಾದ ಜಗನ್ಮಾತೆಯನ್ನು ಪೂಜಿಸಿದ್ದರು. ಆದರೂ ಕ್ರಮೇಣ, ಜನರಿಂದ ಇದು ಮರೆಯಾಯಿತು. ಪೂಜೆ ಅರ್ಚನೆಗಳು ನಿಂತುಹೋದವು. ಸುತ್ತಲೂ ಘೋರ ಅರಣ್ಯ ಬೆಳೆದು ನಿಂತಿತು. ದೇವಸ್ಥಾನ ಜೀರ್ಣಾವಸ್ಥೆಗೆ ಬಂತು. ಈ ಸ್ಥಿತಿಯಲ್ಲಿ ಯಾರಾದರೂ ಭಕ್ತ ಅದನ್ನು ಮತ್ತೆ ಕಟ್ಟಿಸುತ್ತಿದ್ದನು. ಪುನಃ ಕೆಲವು ವರ್ಷಗಳ ನಂತರ ಮತ್ತೆ ಮೊದಲಿನ ಸ್ಥಿತಿಗೇ ಬರುತ್ತಿತ್ತು. ಹೀಗೇ ಅನೇಕ ಬಾರಿ ನಡೆದಿದೆ. ಇದು ಅಂದಿನ ಕಾಲದ ಧಾರ್ಮಿಕ ಅವನತಿಯನ್ನು ಸಂಕೇತಿಸುತ್ತದೆ. ಇಂಥ ಅಧಃಪತನವನ್ನು ತಪ್ಪಿಸಿ, ಸನಾತನ ಧರ್ಮವನ್ನು ಉಳಿಸಿದವರಲ್ಲಿ ಶ್ರೀಶಂಕರಾಚಾರ್ಯರು ಅಗ್ರಗಣ್ಯರು. ಅವರು ಇಡೀ ಭಾರತ ದೇಶದ ಸಂಚಾರವನ್ನು ಕೈಗೊಂಡರು. ವೈದಿಕ ಧರ್ಮವನ್ನು ಪ್ರಚಾರ ಮಾಡಿದರು. ಅನೇಕ ತೀರ್ಥಸ್ಥಾನಗಳ ಪುನರುದ್ಧಾರ ಮಾಡಿದರು. ಅವುಗಳಲ್ಲಿ ಈ ಕಾಮಾಖ್ಯ ಕ್ಷೇತ್ರವೂ ಒಂದು.

ಪೌರಾಣಿಕ ಕತೆಗಳ ಜೊತೆಗೆ ಕೆಲವು ಐತಿಹಾಸಿಕ ಘಟನೆಗಳು ಕೂಡ ಈ ದೇವಸ್ಥಾನದ ಸಂಬಂಧವಾಗಿ ಪ್ರಚಲಿತವಾಗಿವೆ. ದೇವಿಯ ವಿಗ್ರಹವನ್ನು ಸ್ಥಾಪಿಸಿದವರು ಯಾರು? ಎಂದಿನಿಂದ ಇದರ ಪೂಜೆ ಆರಂಭವಾಯಿತು? – ಈ ಪ್ರಶ್ನೆಗಳಿಗೆ ಖಚಿತವಾದ ಉತ್ತರಗಳು ಲಭ್ಯವಿಲ್ಲ. ಆದರೂ ಬಿಹಾರಿನ ರಾಜಮನೆತನದೊಡನೆ, ಈ ದೇವಸ್ಥಾನದ ಜೊತೆಗಿನ ಸಂಬಂಧ ಐತಿಹಾಸಿಕವಾದುದು. ಅದರ ವಿವರ ಹೀಗಿದೆ:

ಆಗಿನ ಕಾಲದಲ್ಲಿ ದೇವಸ್ಥಾನದ ಸುತ್ತಲೂ ಅರಣ್ಯವು ಬೆಳೆದಿತ್ತು. ಪೂಜಾರ್ಚನೆಗಳು ನಿಂತುಹೋಗಿದ್ದವು. ದೇವಸ್ಥಾನವು ಬಿದ್ದುಹೋಗಿ ಅಲ್ಲಿ ಒಂದು ಮಣ್ಣಿನ ಸ್ತೂಪಾಕಾರ ಮಾತ್ರ ಕಂಡುಬರುತ್ತಿತ್ತು. ಪರ್ವತ ಪ್ರದೇಶದಲ್ಲಿ ವಾಸಿಸುತ್ತಿದ್ದ ಕೆಲವು ಬಡಜನರಿಗೆ ದೇವಿಯ ಸಾನ್ನಿಧ್ಯದ ಬಗ್ಗೆ ಅರಿವಿತ್ತು. ಹಾಗೆಂದೇ ಅವರು ಆ ಸ್ತೂಪಾಕಾರವನ್ನೇ ಪೂಜಿಸುತ್ತಿದ್ದರು. ಸ್ತೂಪದಿಂದ ನಿರಂತರವಾಗಿ ಜಲಪ್ರವಾಹವು ಹರಿಯುತ್ತಿತ್ತು. ಆ ಜಲವನ್ನೇ ಅವರು ಭಕ್ತಿಯಿಂದ ಪೂಜಿಸುತ್ತಿದ್ದರು. ಆ ಮೂಲಕ ತಮ್ಮ ದುಃಖಗಳಿಂದ ಮುಕ್ತರಾಗುತ್ತಿದ್ದರು. ಹಾಗೂ ತಮ್ಮ ಜೀವನದ ಬಯಕೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಆದರೆ ಬೆಟ್ಟದ ಕೆಳಗೆ ವಾಸಿಸುತ್ತಿದ್ದ ಜನರಿಗೆ ದೇವಿಯ ಸ್ಥಾನದ ಬಗ್ಗೆ ಗೊತ್ತಿರಲಿಲ್ಲ.

ಈ ಸಮಯದಲ್ಲಿ ಕೂಚ್‌ಬಿಹಾರಿನ ರಾಜನಾದ ವಿಶ್ವಸಿಂಹನು ತನ್ನ ಸಹೋದರನಾದ ಶಿವಸಿಂಹನ ಜೊತೆಗೂಡಿ ಪಕ್ಕದಲ್ಲಿರುವ 'ಅಹೋಂ' ವಂಶದ ರಾಜನೊಂದಿಗೆ ಯುದ್ಧವನ್ನು ಮಾಡಿದನು. ಕಾದಾಡುತ್ತಿರುವಾಗ ತನ್ನ ಸೈನ್ಯದಿಂದ ಪ್ರತ್ಯೇಕವಾಗಿಬಿಟ್ಟನು. ಆತನ ಜೊತೆಗೆ ಅವನ ಸಹೋದರನೂ ಇದ್ದನು. ಇಬ್ಬರೂ ದಾರಿತಪ್ಪಿ ಕಾಡಿನಲ್ಲಿ ಅಡ್ಡಾಡುತ್ತಿರುವಾಗ, ನೀಲಾಚಲ ಪರ್ವತದ ಬಳಿ ಬಂದು ತಲುಪಿದರು. ಯಾವುದೋ ಅವ್ಯಕ್ತ ಶಕ್ತಿಯ ಪ್ರೇರಣೆಯಿಂದ ನೀಲಾಚಲ ಪರ್ವತದ ಮೆಟ್ಟಿಲುಗಳನ್ನು ಏರಿದರು. ಸ್ತೂಪಾಕಾರವಾಗಿ ಇದ್ದ ಮಣ್ಣಿನ ರಾಶಿಯ ಬಳಿಗೆ ಬಂದು ತಲುಪಿದರು. ಅಲ್ಲಿ ಒಬ್ಬ ವೃದ್ಧೆಯು ಪೂಜೆ ಮಾಡುತ್ತಿರುವುದನ್ನು ನೋಡಿದರು. ರಾಜನು ಅತಿಯಾಗಿ ದಣಿದಿದ್ದನು. ವೃದ್ಧೆಗೆ ಕುಡಿಯಲು ನೀರನ್ನು ಕೇಳಿದನು. ಸ್ತೂಪಾಕಾರದಿಂದ ಹೊರಬರುತ್ತಿರುವ ಜಲವನ್ನೇ ಆಕೆ ಕುಡಿಯಲು ಕೊಟ್ಟಳು. ರಾಜನು ಜಲವನ್ನು ಕುಡಿದು, ಆ ಮಣ್ಣಿನ ರಾಶಿಯ ಬಗ್ಗೆ ಮತ್ತು ಆ ನೀರಿನ ಬಗ್ಗೆ ಕೇಳಿದನು. ಆ ಮಹಾಪೀಠದ ಬಗ್ಗೆ ವೃದ್ಧೆ ರಾಜನಿಗೆ ವಿವರಿಸಿ ಹೇಳಿದಳು; ದೇವಿಯ ಮಹಿಮೆಯನ್ನು ಬಣ್ಣಿಸಿದಳು. ಇಲ್ಲಿಯ ದೇವಿಯನ್ನು ಆರಾಧಿಸುವವರು ತಮ್ಮ ಬಯಕೆಗಳನ್ನೆಲ್ಲ ಈಡೇರಿಸಿಕೊಳ್ಳುವರು ಎಂದು ತಿಳಿಸಿದಳು.

ಇದನ್ನು ಆಲಿಸಿದ ರಾಜನು, ದೇವಿಯ ಮೇಲಿನ ಭಕ್ತಿಯಿಂದ ಆ ಸ್ತೂಪಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದನು. ತನ್ನ ಸೈನ್ಯದೊಡನೆ ತಾನು ಮತ್ತೆ ಕೂಡಿಕೊಳ್ಳುವಂತೆ ಮಾಡಬೇಕೆಂದು